

‘ಅಯೋಗ್ಯ’ ಗೆಲುವಿನ ನಗೆಯಲ್ಲಿ ನೀನಾಸಂ ಸತೀಶ್ ಹಾಗೂ ರಚಿತಾ ರಾಮ್



ಹೊಸ ಚಿಗುರು ಅಭಿಷೇಕ್ ಗೌಡ ಜೊತೆ ಹಳೆ ಬೇರು ಅಂಬರೀಷ್



‘ಹೆಬ್ಬೆಟ್ ರಾಮಕ್ಕ’ ತಾರಾ

ಕನ್ನಡ ಚಿತ್ರರಂಗದಲ್ಲಿ ಇಂಥ ಘಟನೆ ನಡೆಯುವುದು ಸಾಧ್ಯವೇ ಇಲ್ಲ ಎಂದು ಹೇಳಿಕೊಂಡರು. ಸಿನಿಮಾಗಳಲ್ಲಿ ಹೆಣ್ಣನ್ನು ಸರಕಾಗಿ ಬಳಸಿಕೊಳ್ಳುವ ಉದ್ಯಮ ವಾಸ್ತವದಲ್ಲೂ ತನ್ನ ಮನೋಭಾವ ಬೇರೆಯೇನೂ ಅಲ್ಲ ಎನ್ನುವುದನ್ನು ಸಾಬೀತುಪಡಿಸಲು ಹಟ ತೊಟ್ಟಂತಿತ್ತು. ಹಿರಿಯ ನಟಿಯರು ಕೂಡ ಶ್ರುತಿ ಅವರ ಬೆಂಬಲಕ್ಕೆ ನಿಲ್ಲಲಿಲ್ಲ. ಚಿತ್ರರಂಗದ ಹಿರಿಯ ಪ್ರತಿನಿಧಿ ಹಾಗೂ ಕನ್ನಡ ಮತ್ತು ಸಂಸ್ಕೃತಿ ಸಚಿವರಾದ ಜಯಮಾಲಾ ಅವರು ಕೂಡ ತನ್ನ ಜೂನಿಯರ್‌ಗೆ ನೈತಿಕ ಸ್ಥೈರ್ಯ ತುಂಬುವ ಒಂದು ಮಾತನ್ನೂ ಆಡಲಿಲ್ಲ.

ಅರ್ಜುನ್ ಸರ್ಜಾ ಅವರನ್ನು ಬೆಂಬಲಿಸಲು ಹೊರಟ ಉದ್ಯಮ ಪರೋಕ್ಷವಾಗಿ ಮಾಡಿದ್ದು ಸರ್ಜಾ ಅವರ ವರ್ಚಸ್ಸನ್ನು ಕುಂದಿಸುವ ಕೆಲಸವನ್ನೇ. ಇಬ್ಬರನ್ನೂ ಮಾತಿಗೆ ಕೂರಿಸಿ, ಇಬ್ಬರ ಘನತೆಗೂ ಕುಂದುಂಟಾಗದಂತೆ ಸಮಸ್ಯೆ ಬಗೆಹರಿಸುವ ಕೆಲಸದಲ್ಲಿ ಯಾರಿಗೂ ಆಸಕ್ತಿಯಿದ್ದಂತಿರಲಿಲ್ಲ. ಹೆಣ್ಣನ್ನು ಕ್ಷಮೆ ಕೇಳಿಸುವುದರಲ್ಲಿ, ಒಂಟಿದನಿಯಾಗಿಸುವುದರಲ್ಲಿ ಎಲ್ಲರಿಗೂ ಉತ್ಸಾಹ. ಹೆಣ್ಣಿನ ಧ್ವನಿ ಒಂಟಿಯಾಗುವುದು ಯಾವುದೇ ಆರೋಗ್ಯಕರ ಸಮಾಜದ ಲಕ್ಷಣವಲ್ಲ ಎನ್ನುವ ಹಿನ್ನೆಲೆಯಲ್ಲಿ ‘ಮೀ ಟೂ’ ಪ್ರಕರಣವನ್ನು ಗಮನಿಸಬೇಕು. ಶ್ರುತಿ ಅವರ ಪ್ರಕರಣದಲ್ಲಿ ಚಿತ್ರೋದ್ಯಮ ಕೊಂಚ ಸೌಜನ್ಯದಿಂದ ವರ್ತಿಸಿದ್ದಲ್ಲಿ ಇನ್ನಷ್ಟು ಯುವನಟಿಯರು ತಮ್ಮ ಅಳಲು ತೋಡಿಕೊಳ್ಳುತ್ತಿದ್ದರೇನೊ?

ಲೈಂಗಿಕ ಶೋಷಣೆಯ ಮತ್ತೊಂದು ಆರೋಪ ‘ಬಳೆ ಕೆಂಪ’ ಚಿತ್ರದ ನಿರ್ದೇಶಕ ಈರೇಗೌಡರ ವಿರುದ್ಧ ವ್ಯಕ್ತವಾಯಿತು. ಈರೇಗೌಡರು ತನ್ನನ್ನು ಯಾವ ರೀತಿ ಶೋಷಿಸಿದರು ಎನ್ನುವುದನ್ನು ಯುವತಿಯೊಬ್ಬಳು ಫೇಸ್‌ಬುಕ್‌ನಲ್ಲಿ ಎಳೆಎಳೆಯಾಗಿ ಚಿತ್ರಿಸಿದ್ದಳು. ಆಶ್ಚರ್ಯವೆಂದರೆ, ಅರ್ಜುನ್ ಸರ್ಜಾ ಅವರ ಪರವಾಗಿ ನಿಂತಿದ್ದ ಚಿತ್ರೋದ್ಯಮದ ಯಾರೊಬ್ಬರೂ ಈರೇಗೌಡರನ್ನು ಬೆಂಬಲಿಸಿ ಒಂದು ಮಾತನ್ನೂ ಆಡಲಿಲ್ಲ. ಈರೇಗೌಡರ ಬಗ್ಗೆ ಆರೋಪ ಎದುರಾದ ಸಂದರ್ಭದಲ್ಲಿ, ‘ಬಳೆ ಕೆಂಪ’ ಧರ್ಮಶಾಲಾ ಚಿತ್ರೋತ್ಸವದಲ್ಲಿ ಪ್ರದರ್ಶನಕ್ಕೆ ಆಯ್ಕೆಯಾಗಿತ್ತು. ಆದರೆ, ನಿರ್ಮಾಪಕರು ತಮ್ಮ ಚಿತ್ರವನ್ನು ಧರ್ಮಶಾಲಾ ಸೇರಿದಂತೆ ಎಲ್ಲ ಚಿತ್ರೋತ್ಸವಗಳಿಂದಲೂ